KADG320001052023

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಉಪಸ್ಥಿತರು : ಶ್ರೀ ಬೀರಪ್ಪ ಕಾಂಬ್ಳೆ,**

**ಬಿ.ಎ,. ಎಲ್ಎಲ್.ಬಿ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು**

**ಮತ್ತು ಪ್ರ. ದ. ನ್ಯಾ. ದಂ. ನ್ಯಾಯಾಲಯ, ಹರಿಹರ**

**ಅಪರಾಧ ಪ್ರಕರಣ ಸಂಖ್ಯೆ : 32/2023**

**ದಿನಾಂಕ 27 ನೇ ಜುಲೈ, 2026 ರಂದು**

**ಫಿರ್ಯಾದುದಾರರುಃ**

ಸರ್ಕಾರದ ಪರವಾಗಿ ಗ್ರಾಮಾಂತರ ಪೊಲೀಸ್ ಠಾಣೆ,
ಹರಿಹರ.

**(ಅಭಿಯೋಜನ ಪರ, ಸರ್ಕಾರಿ ಸಹಾಯಕ ಅಭಿಯೋಜಕರು)**

**ವಿರುದ್ಧ**

**ಆರೋಪಿತರು :**

ಆರೋಪಿ ಸಂ.1 : ನಾಗರಾಜ ತಂದೆ ಬಾಳಪ್ಪ, ವಯಸ್ಸು 21 ವರ್ಷ, ಕೂಲಿ,

ವಾಸಃ ಬನ್ನಿಕೋಡು ಗ್ರಾಮ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ.

ಆರೋಪಿ ಸಂ.2 : ರಾಯಪ್ಪ ತಂದೆ ಭೀಮಪ್ಪ, ವಯಸ್ಸು 22 ವರ್ಷ, ಕೂಲಿ,

ವಾಸಃ ಕೆ.ಬೇವಿನಹಳ್ಳಿ ಗ್ರಾಮ, ಹರಿಹರ ತಾಲ್ಲೂಕು,

ದಾವಣಗೆರೆ ಜಿಲ್ಲೆ.

**(1 ನೇ ಆರೋಪಿತನ ಪರ ಶ್ರೀ ಎನ್.ಬಿ., ವಕೀಲರು ಮತ್ತು**

**2 ನೇ ಆರೋಪಿ ಪರ ಶ್ರೀ ಎಸ್.ಕೆ.ವೈ.,)**

| | |
|---|---|
| ಘಟನೆ ಸಂಭವಿಸಿದ ದಿನಾಂಕ | 01.06.2021 |
| ವರದಿಯಾದ ದಿನಾಂಕ | 07.07.2022 |
| ಫಿರ್ಯಾದಿದಾರರ ಹೆಸರು | ಪತ್ರೇಶ್ ಟಿ.ಎಂ. |
| ಸಾಕ್ಷಿ ವಿಚಾರಣೆ ಪ್ರಾರಂಭಿಸಿದ ದಿನಾಂಕ | 27.03.2025 |
| ಸಾಕ್ಷಿ ವಿಚಾರಣೆ ಮುಗಿಸಿದ ದಿನಾಂಕ | 01.04.2026 |
| ಆರೋಪಗಳು | ಭಾರತೀಯ ದಂಡ ಸಂಹಿತೆ ಕಲಂ 380, 457 ಸಹವಾಚಕ ಕಲಂ 34 ರ ಅಡಿಯಲ್ಲಿ |
| ನ್ಯಾಯಾಧೀಶರು ತೀರ್ಮಾನ | ನಿರ್ದೋಷಿಯೆಂದು ಪರಿಗಣಿಸಿದೆ |
| ತೀರ್ಮಾನವಾದ ದಿನಾಂಕ | 27.07.2026 |

**:: ತೀರ್ಪು ::**

ಈ ಪ್ರಸ್ತುತ ಪ್ರಕರಣವನ್ನು ಪೊಲೀಸ್ ಇನ್ಸ್‌ಪೆಕ್ಟರ್, ಗ್ರಾಮಾಂತರ ಪೊಲೀಸ್ ಠಾಣೆ, ಹರಿಹರ ಇವರು ಆರೋಪಿ ಸಂ.1 ಮತ್ತು 2 ರವರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 380, 457 ಸಹವಾಚಕ ಕಲಂ 34 ರ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆ ಎಂದು ಆರೋಪಿಸಿ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನ ಪಕ್ಷದವರ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇರುತ್ತದೆಃ**

ದಿನಾಂಕ 01.06.2021 ರಂದು ರಾತ್ರಿ ಸಮಯದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಂಡಜ್ಜಿ ಗ್ರಾಮದಲ್ಲಿರುವ ಬೀಗ ಹಾಕಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಕೊಠಡಿಯನ್ನು ಗಮನಿಸಿ, ಸದರಿ ಕೊಠಡಿಯ ಬಾಗಿಲ ಬೀಗವನ್ನು ಕಲ್ಲಿನಿಂದ ಹೊಡೆದು ಕೊಠಡಿಯೊಳಗೆ ಪ್ರವೇಶ ಮಾಡಿ, ಕೊಠಡಿಯಲ್ಲಿದ್ದ ರಟ್ಟಿನ ಬಾಕ್ಸ್‌ನಲ್ಲಿದ್ದ ಸುಮಾರು ರೂ.4,500/- ಬೆಲೆ ಬಾಳುವ ಪಾಮ್ ಆಯಿಲ್ ನ ಒಟ್ಟು 30 CC.274/2021

ಪ್ಯಾಕೆಟ್ ಕಳ್ಳತನ ಮಾಡಿಕೊಂಡು ಹೋಗಿ ದಾರಿಯಲ್ಲಿ ಹೋಗುತ್ತಿದ್ದವರಿಗೆ ಮಾರಾಟ ಮಾಡಿ ಬಂದ ಹಣವನ್ನು ಸಮನಾಗಿ ಹಂಚಿಕೊಂಡು ಸ್ವಂತಕ್ಕೆ ಬಳಸಿಕೊಂಡಿರುವುದು ಆರೋಪಿತರ ಹೇಳಿಕೆಗಳಿಂದ ಮತ್ತು ತನಿಖೆಯಿಂದ ದೃಢಪಟ್ಟ ಮೇರೆಗೆ ಆರೋಪಿತರ ವಿರುದ್ಧ ತಮ್ಮ ಠಾಣಾ ಮೊಕದ್ದಮೆ 108/2021 ರಂತೆ ಪ್ರಕರಣ ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಪ್ರಕರಣದ ತನಿಖಾಧಿಕಾರಿಗಳು ತನಿಖೆಯನ್ನು ಮುಂದುವರೆಸಿ ಗುನ್ನಾ ಸ್ಥಳಕ್ಕೆ ಭೇಟಿ ನೀಡಿ ಗುನ್ನಾ ಸ್ಥಳದ ಪಂಚನಾಮೆಯನ್ನು ಮಾಡಿ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡು, ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 380, 457 ಸಹವಾಚಕ ಕಲಂ 34 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ದೋಷಾರೋಪಣಾ ಪತ್ರ ಸ್ವೀಕರಿಸಿದ ನಂತರ ಈ ನ್ಯಾಯಾಲಯವು ಆರೋಪಿಗಳ ವಿರುದ್ಧ ಸಂಜ್ಞೆಯಗಳನ್ನು ತೆಗೆದುಕೊಂಡಿರುತ್ತದೆ. ಆರೋಪಿಗಳು ವಕೀಲರ ಮುಖಾಂತರ ಜಾಮೀನು ಅರ್ಜಿ ಸಲ್ಲಿಸಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡಿರುತ್ತಾರೆ. ಆನಂತರ ಆರೋಪಿಗಳಿಗೆ ದಂಡ ಪ್ರಕ್ರಿಯಾ ಸಂಹಿತೆ.207 ರಡಿಯಲ್ಲಿ ತಿಳಿಸಿರುವಂತೆ ಅಭಿಯೋಜನಾ ಕೇಸಿನ ದಾಖಲೆಗಳ ನಕಲುಗಳನ್ನು ಆರೋಪಿಗಳಿಗೆ ನೀಡಿ, ಅವರ ವಿರುದ್ಧದ ದೋಷಾರೋಪಣೆಯನ್ನು ತಯಾರಿಸಿ, ಓದಿ ವಿವರಿಸಲಾಗಿ ಆರೋಪಿಗಳು ತಮ್ಮ ವಿರುದ್ಧದ ಆರೋಪಗಳನ್ನು ಅಲ್ಲಗಳೆದಿದ್ದು, ಆರೋಪಗಳು ವಿಚಾರಣೆಯಾಗಲೆಂದು ಕೇಳಿಕೊಂಡ ಮೇರೆಗೆ ಅಧಿವಿಚಾರಣೆ ಮಾಡಲಾಯಿತು.

**4.** ಅಭಿಯೋಜನಾ ಪಕ್ಷದವರು ಆರೋಪಿತನ ವಿರುದ್ಧ ಹೊರಿಸಿರುವ ದೋಷಾರೋಪಣೆಯನ್ನು ರುಜುವಾತು ಪಡಿಸಲು 11 ಜನ ಸಾಕ್ಷಿದಾರರನ್ನು ಪ್ರಾ.ಸಾ.1 ರಿಂದ ಪ್ರಾ.ಸಾ.11 ಎಂದು, 14 ದಾಖಲೆಗಳನ್ನು ನಿ.ಪಿ.1 ರಿಂದ ನಿ.ಪಿ.14 ಎಂದು ಗುರುತಿಸಿಕೊಂಡಿರುತ್ತಾರೆ. ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಯಿತು. ಆರೋಪಿತರು ತಮ್ಮ ಪರವಾಗಿ ಯಾವುದೇ ಸಾಕ್ಷ್ಯಗಳನ್ನು ವಿಚಾರಣೆಗೆ ಒಳಪಡಿಸಿರುವುದಿಲ್ಲ.

**5.** ಉಭಯ ಪಕ್ಷಗಳ ಪರ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರ ಹಾಗೂ ಆರೋಪಿತನ ಪರ ಮಾನ್ಯ ವಕೀಲರ ವಾದ ವಿವಾದಗಳನ್ನು ಕೇಳಲಾಯಿತು ಹಾಗೂ ಪ್ರಕರಣದ ಕಡತಗಳನ್ನು ಪರಿಶೀಲಿಸಲಾಯಿತು.

**6.** ಈ ಪ್ರಕರಣದಲ್ಲಿ ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ:

**-:ಅಂಶಗಳು:-**

1. ದಿನಾಂಕ 01.06.2021 ರಂದು ರಾತ್ರಿ ಸಮಯದಲ್ಲಿ ಹರಿಹರ ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಯ ಕೊಂಡಜ್ಜಿ ಗ್ರಾಮದಲ್ಲಿರುವ ಬೀಗ ಹಾಕಿದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಕೊಠಡಿಯನ್ನು ಗಮನಿಸಿ, ಸದರಿ ಕೊಠಡಿಯ ಬಾಗಿಲ ಬೀಗವನ್ನು ಕಲ್ಲಿನಿಂದ ಹೊಡೆದು ಕೊಠಡಿಯೊಳಗೆ ಅಕ್ರಮವಾಗಿ ಪ್ರವೇಶ ಮಾಡಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 457 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ?

2. ಅದೇ ರೀತಿ ಮೇಲೆ ಹೇಳಿದ ದಿವಸ ವೇಳೆ ಮತ್ತು ಸ್ಥಳದಲ್ಲಿ ಆರೋಪಿತರು ಅಕ್ರಮವಾಗಿ ಪ್ರವೇಶಿಸಿ ಕೊಠಡಿಯಲ್ಲಿದ್ದ ರಟ್ಟಿನ ಬಾಕ್ಸ್‌ನಲ್ಲಿದ್ದ ಸುಮಾರು ರೂ.4,500/- ಬೆಲೆ ಬಾಳುವ ಪಾಮ್ ಆಯಿಲ್ ನ ಒಟ್ಟು 30 ಪ್ಯಾಕೇಟ್ ಕಳ್ಳತನ ಮಾಡಿ ಆರೋಪಿತರು ಭಾರತೀಯ ದಂಡ ಸಂಹಿತೆ ಕಲಂ 380 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತಾರೆ ಎಂದು ಅಭಿಯೋಜನೆಯವರು ಯುಕ್ತಾ ಸಂಶಯಾತೀತಿವಾಗಿ ರುಜುವಾತು ಪಡಿಸಿದ್ದಾರೆಯೇ?

3. ಏನು ಆದೇಶ ಅಥವಾ ಶಿಕ್ಷೆ?

**7.** ಅಭಿಯೋಜನಾ ಪರ ಹಾಜರು ಪಡಿಸಲಾದಂತಹ ಮೌಖಿಕ ಸಾಕ್ಷ್ಯಗಳನ್ನು ದಾಖಲೆಗಳನ್ನು ಮತ್ತು ಉಭಯ ಪಕ್ಷಗಳ ಪರ ಮಾನ್ಯ ವಕೀಲರುಗಳ ವಾದವನ್ನು ಸಂಪೂರ್ಣವಾಗಿ ಪರಿಗಣಿಸಿ ಮೇಲಿನ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

**ಅಂಶ.1 ಮತ್ತು 2 - ನಕಾರಾತ್ಮಕವಾಗಿ**

**ಅಂಶ.3 - ಅಂತಿಮ ಆದೇಶನುಸಾರವಾಗಿ**

**:ಕಾರಣಗಳು:**

**8. ಅಂಶ.1 ಮತ್ತು 2 :-** ಅಂಶ 1 ಮತ್ತು 2 ಇವು ಒಂದನ್ನೊಂದು ಅವಲಂಬಿಸಿದ್ದು, ಇವುಗಳನ್ನು ಉತ್ತರಿಸುವಾಗ ಒಂದೇ ರೀತಿಯಾದಂತಹ ಚರ್ಚೆ ಹಾಗೂ ವಿಮರ್ಶೆ ಅವಶ್ಯಕತೆ ಇರುತ್ತದೆ. ಆದ್ದರಿಂದ ಅವುಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿರುತ್ತದೆ.

**9.** ಚಾಸಾ.1/ಪ್ರಾಸಾ.1 ರವರು ದೂರದಾರಾಗಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 31.05.2021 ರಂದು ಸರ್ಕಾರದಿಂದ ಮದ್ಯಾಹ್ನದ ಬಿಸಿ ಊಟ ಯೋಜನೆಯ ಅಡಿಯಲ್ಲಿ ಅಕ್ಕಿ ಬೇಳೆ ಮತ್ತು ಎಣ್ಣೆ ಸರಬರಾಜು ಆಗಿದ್ದು, ದಿನಾಂಕಃ 01.06.2021 ರಂದು 102 ಮಕ್ಕಳಿಗೆ ಅದನ್ನು ವಿತರಣೆ ಮಾಡಿ ಉಳಿದ ಸಾಮಗ್ರಿಯನ್ನು ಕೊಠಡಿಯಲ್ಲಿ ಇಟ್ಟಿದ್ದೆವು. ಮಾರನೇ ದಿನ ಬೆಳಿಗೆ 10.00 ಗಂಟೆಗೆ ಮುಖ್ಯ ಅಡುಗೆ ಸಹಾಯಕರಾದ ಚಾಸಾ.4 ರವರಿಗೆ ಬೀಗವನ್ನು ಕೊಟ್ಟು ಕಳುಹಿಸಿದ್ದು, ಅವರು ಸದರಿ ಕೊಠಡಿ ಬೀಗವನ್ನು ತೆಗೆದು ನೋಡಿದಾಗ ಸದರಿ ಕೊಠಡಿಯ ಕಿಟಕಿಯ ಗಾಜು ಒಡೆದು ಎಣ್ಣೆ ಪ್ಯಾಕೇಟುಗಳು ಇಲ್ಲದಿರುವುದನ್ನು ನೋಡಿ ತನಗೆ ಬಂದು ತಿಳಿಸಿರುತ್ತಾರೆ. ನಂತರ ತಾನು

ಸದರಿ ಕೊಠಡಿಗೆ ಹೋಗಿ ನೋಡಿದಾಗ ಅಲ್ಲಿ 3 ಬಾಕ್ಸ್ ಗಳಲ್ಲಿ ಇದ್ದ ತಲಾ 10 ರಂತೆ ಇದ್ದ 30 ಎಣ್ಣೆ ಪ್ಯಾಕೇಟುಗಳು ಕಳ್ಳತನವಾಗಿರುವುದು ಕಂಡುಬಂದಿರುತ್ತದೆ. ಸದರಿ ಎಣ್ಣೆ ಪಾಮ್ ಆಯಿಲ್ ಆಗಿರುತ್ತದೆ. ನಂತರ ತನ್ನ ಮೇಲಾಧಿಕಾರಿಗಳಿಗೆ ಸದರಿ ವಿಚಾರದ ಬಗ್ಗೆ ವರದಿ ಮಾಡಿರುತ್ತೇನೆ. ನಂತರ ಅವರ ನಿರ್ದೇಶನದಂತೆ ಠಾಣೆಗೆ ಹೋಗಿ ದಿನಾಂಕಃ11.06.2021 ರಂದು ಲಿಖಿತ ದೂರನ್ನು ಸಲ್ಲಿಸಿರುತ್ತೇನೆ. ನಂತರ ಪೊಲೀಸರು ಠಾಣೆಗೆ ಕರೆಯಿಸಿ ತನ್ನ ಹೇಳಿಕೆಯನ್ನು ಪಡೆದಿರುತ್ತಾರೆ. ಆ ಕಾಲಕ್ಕೆ ಕಳ್ಳತನ ಮಾಡಿದ ಆರೋಪಿಗಳು ಸಿಕ್ಕಿರುತ್ತಾರೆ ಎಂದು ಪೊಲೀಸರು ತಿಳಿಸಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**10.** ಚಾಸಾ.4/ಪ್ರಾಸಾ.2 ರವರು ಸಾಂದರ್ಭಿಕ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಪ್ರತಿದಿನ ಶಾಲೆಗೆ ಬೆಳಿಗ್ಗೆ 9.30 ಕ್ಕೆ ಬಂದು ಮದ್ಯಾಹ್ನ 3.00 ಗಂಟೆಗೆ ಮರಳಿ ಹೋಗುತ್ತೇವೆ. ಈಗ್ಗೆ 2021-22 ನೇ ಸಾಲಿನಲ್ಲಿ ಒಂದು ದಿನ ತಮ್ಮ ಶಾಲೆಯ ಮುಖ್ಯೋಪಾಧ್ಯಾಯರ ಕೊಠಡಿಯ ಪಕ್ಕದಲ್ಲಿರುವ ಗುಮಾಸ್ತ ಕೊಠಡಿಯನ್ನು ತೆಗೆದು ನೋಡಲಾಗಿ ಅಡುಗೆಗೆ ಉಪಯೋಗಿಸುವ ಎಣ್ಣೆಯ 3 ಬಾಕ್ಸಗಳು ಕಳುವಾಗಿತ್ತು, ಒಂದು ಬಾಕ್ಸ್ ನಲ್ಲಿ ಸುಮಾರು 10 ಎಣ್ಣೆ ಪ್ಯಾಕೇಟುಗಳು ಇದ್ದವು. ಕೊಠಡಿಯ ಒಳಗೆ ನೋಡಲಾಗಿ ಕಿಟಕಿಯ ಗ್ಲಾಸ್ ಒಡೆದಿತ್ತು. ನಂತರ ಸದರಿ ವಿಚಾರವನ್ನು ತಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ತಿಳಿಸಿದೆವು. ತಾನು ಇಲ್ಲಿಯವರೆಗೆ ಸದರಿ ವಿಚಾರಕ್ಕೆ ಪೊಲೀಸ್ ಠಾಣೆಗೆ ಹೋಗಿಲ್ಲ. ಕಳ್ಳತನ ಯಾರು ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ. ಮುಖ್ಯೋಪಾಧ್ಯಾಯರು ಈ ವಿಚಾರವಾಗಿ ಏನು ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ. ಈಗ ನ್ಯಾಯಾಲಯದಲ್ಲಿರುವ ಆರೋಪಿ ಬಗ್ಗೆ ತನಗೆ ಮಾಹಿತಿ ಇಲ್ಲ. ಕಳ್ಳತನ ಯಾರು

ಮಾಡಿರುತ್ತಾರೆ ಎಂದು ತನಗೆ ಗೊತ್ತಿಲ್ಲ. ಈ ಘಟನೆಯಾದ ನಂತರ ಘಟನಾ ಸ್ಥಳಕ್ಕೆ ಯಾರು ಬಂದಿರಲಿಲ್ಲ. ಈ ಮೇಲೆ ಹೇಳಿದ ವಿಚಾರವಾಗಿ ತಾನು ಪೊಲೀಸರಿಗೆ ಹೇಳಿಲ್ಲ. ತಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲ. ಛಾಯಾ ಚಿತ್ರದಲ್ಲಿ ಇಲ್ಲಿ ಕಳುವಾಯಿತು ಎಂದು ತಾನು ತೋರಿಸುತ್ತಿದ್ದೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**11.** ಚಾಸಾ.2/ಪ್ರಾಸಾ.3 ರವರು ಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 11.06.2021 ರಂದು ಕೊಂಡಜ್ಜಿ ಪ್ರೌಢಶಾಲೆಯಲ್ಲಿ ಅಡುಗೆ ಎಣ್ಣೆ ಕಳ್ಳತನವಾದ ಬಗ್ಗೆ ಸಹಿಯನ್ನು ಮಾಡಿರುತ್ತೇನೆ. ಶಾಲೆಯಲ್ಲಿ ಅಡುಗೆ ಕಳ್ಳತನವಾಗಿದ್ದು, ಸದರಿ ಸಂದರ್ಭದಲ್ಲಿ ಚಾಸಾ.3 ರವರು ತನ್ನೊಂದಿಗೆ ಇದ್ದರು. ಸದರಿ ಸಂದರ್ಭದಲ್ಲಿ ಚಾಸಾ.1 ರವರು ಅಡುಗೆ ಎಣ್ಣೆ ಕಳ್ಳತನವಾದ ಜಾಗವನ್ನು ತೋರಿಸಿದರು. ಸದರಿ ಸಂದರ್ಭದಲ್ಲಿ ಪೊಲೀಸರು ಪಂಚನಾಮೆ ಜರುಗಿಸಿ ಪೋಟೋ ತೆಗೆದಿರುತ್ತಾರೆ. ಸದರಿ ಪಂಚನಾಮೆಯನ್ನು ಮದ್ಯಾಹ್ನ 1.45 ರಿಂದ 2.30 ಗಂಟೆ ಸಮಯದಲ್ಲಿ ಮಾಡಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**12.** ಚಾಸಾ.5/ಪ್ರಾಸಾ.4 ರವರು ಸಾಂದರ್ಭಿಕ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ್ಗೆ 2021 ರಲ್ಲಿ ಒಂದು ದಿನ ಕೊಂಡಜ್ಜಿ ಪ್ರೌಢಶಾಲೆಯಲ್ಲಿ ಬೆಳಿಗ್ಗೆ ಸುಮಾರು 10.00 ಗಂಟೆಗೆ ಚಾಸಾ.4 ರವರು ದಾಸ್ತಾನು ಕೊಠಡಿಗೆ ಹೋಗಿ ನೋಡಿದಾಗ ಸದರಿ ಕೊಠಡಿಯಿಂದ ಅಡುಗೆಗೆ ಉಪಯೋಗಿಸುವ ಎಣ್ಣೆಯ 3 ಬಾಕ್ಸ್‌ಗಳು ಕಳುವಾಗಿದ್ದು, ಸದರಿ ಸಂದರ್ಭದಲ್ಲಿ ತಾನು ಅವರೊಂದಿಗೆ ಹೋಗಿ ನೋಡಿದೆನು. ಕಳುವಾದ ವಿಚಾರವನ್ನು ಮುಖ್ಯೋಪಾಧ್ಯಯರು ತಿಳಿಸಿದರು. ಸದರಿ ಎಣ್ಣೆ ಪ್ಯಾಕೇಟ್‌ಗಳನ್ನು

ಕೊಠಡಿಯ ಕಿಟಕಿ ಗ್ಲಾಸ್ ಒಡೆದು ಕಳುವು ಮಾಡಿದ್ದರು. ನಂತರ ಸದರಿ ವಿಚಾರವನ್ನು ತಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೆ ತಿಳಿಸಿದೆವು. ಈ ವಿಚಾರವಾಗಿ ಮುಖ್ಯೋಪಾಧ್ಯಾಯರು ಠಾಣೆಗೆ ದೂರು ನೀಡಿರುತ್ತಾರೆ. ಈ ವಿಚಾರವಾಗಿ ತಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ. ಈಗ ನ್ಯಾಯಾಲಯದಲ್ಲಿರುವ ಆರೋಪಿ ಬಗ್ಗೆ ತನಗೆ ಮಾಹಿತಿ ಇಲ್ಲ. ತಾನು ಪೊಲೀಸರಿಗೆ ಯಾವುದೇ ಮರು ಹೇಳಿಕೆ ನೀಡಿಲ್ಲವೆಂದು ಸಾಕ್ಷಿ ನುಡಿದಿರುತ್ತಾರೆ.

**13.** ಚಾಸಾ.6/ಪ್ರಾಸಾ.5 ರವರು ಸಾಂದರ್ಭಿಕ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ ಸುಮಾರು 5 ವರ್ಷಗಳ ಹಿಂದೆ ಒಂದು ದಿನ ಬೆಳಿಗ್ಗೆ ಸುಮಾರು 9.00 ಗಂಟೆಗೆ ರತ್ನಮ್ಮ ಚಾಸಾ.4 ಕಿಟಕಿ ಒಡೆದು ಎಣ್ಣೆ ಕಳ್ಳತನ ಮಾಡಿದ್ದಾರೆ ಎಂದು ತನಗೆ ತಿಳಿಸಿದರು. ನಂತರ ತಾನು ಮತ್ತು ರತ್ನಮ್ಮ ಈ ವಿಚಾರವನ್ನು ಶಾಲಾ ಮುಖ್ಯೋಪಾಧ್ಯಯರಿಗೆ ಹೇಳಿದೆವು. ಈ ವಿಚಾರವಾಗಿ ಶಾಲಾ ಮುಖ್ಯೋಪಾಧ್ಯಯರು ದೂರು ನೀಡಿದರು. ನಂತರ ಅದೇ ದಿನ ಮದ್ಯಾಹ್ನ ಸುಮಾರು 1 ವರೆ ಗಂಟೆಗೆ ಪೊಲೀಸರು ಬಂದು ವಿಚಾರಣೆ ಮಾಡಿದರು. ಈ ಎಲ್ಲಾ ವಿಚಾರವಾಗಿ ಹೇಳಿಕೆ ನೀಡಿರುತ್ತೇನೆ. ಸದರಿ ಕಳ್ಳತನವನ್ನು ಯಾರು ಮಾಡಿರುತ್ತಾರೆ ಎಂದು ತನಗೆ ತಿಳಿದಿಲ್ಲ. ಕಳ್ಳರು ಸಿಕ್ಕ ಬಗ್ಗೆ ತನಗೆ ಯಾವುದೇ ಮಾಹಿತಿ ಇಲ್ಲ. ನಾಗರಾಜ್ ರಾಯಪ್ಪ ಯಾರು ಎಂದು ತನಗೆ ಗೊತ್ತಿಲ್ಲವೆಂದು ಹೇಳಿಕೆ ನೀಡಿರುತ್ತಾರೆ.

**14.** ಚಾಸಾ.8/ಪ್ರಾಸಾ.6 ರವರು ಜಪ್ತು ಪಂಚನಾಮೆಯ ಸಾಕ್ಷಿದಾರರಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಸುಮಾರು 3 ವರ್ಷಗಳ ಹಿಂದೆ ಕೊಂಡಜ್ಜಿ

ಗ್ರಾಮದ ಶಾಲೆಯಲ್ಲಿ ಸಹಿಗಳನ್ನು ಮಾಡಿರುತ್ತೇನೆ. ಯಾವ ಕಾರಣಕ್ಕೆ ಸಹಿ ಮಾಡಿದ್ದೇನೆ ಎಂದು ಗೊತ್ತಿಲ್ಲ. ಪ್ರಕರಣದ ಬಗ್ಗೆ ತನಗೆ ಮಾಹಿತಿ ಇಲ್ಲ. ಪಂಚನಾಮೆ ಕಾಲಕ್ಕೆ ತನ್ನೊಂದಿಗೆ ಪೊಲೀಸರು ಇದ್ದರು ಮತ್ತೆ ಯಾರು ಇದ್ದರು ಎಂದು ತನಗೆ ಗೊತ್ತಿಲ್ಲ. ಕೊಂಡಜ್ಜಿ ಗ್ರಾಮದ ಶಾಲೆಯಲ್ಲಿ ಪೋಟೋ ತೆಗದಿದ್ದಾರೆ. ಯಾವ ಕಾರಣಕ್ಕಾಗಿ ತೆಗೆದಿರುತ್ತಾರೆ ಎಂದು ಗೊತ್ತಿಲ್ಲ. ತಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಕೊಂಡಜ್ಜಿ ಶಾಲೆಯಲ್ಲಿ ತಾನು ಸಹಿ ಮಾಡಿದಾಗ ಸಮಯ ಮದ್ಯಾಹ್ನ 3.00 ರಿಂದ 4.00 ಗಂಟೆ ಆಗಿತ್ತು ಎಂದು ಸಾಕ್ಷಿ ನುಡಿದಿರುತ್ತಾರೆ.

**15.** ಚಾಸಾ.9/ಪ್ರಾಸಾ.7 ರವರು ಪೊಲೀಸ್ ಪೇದೆಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಕ್ರೈಂ ನಂಃ 68/2021 ರಲ್ಲಿ ದಿನಾಂಕಃ 30.09.2020 ರಂದು ತಮ್ಮ ಠಾಣಾ ಪಿಎಸ್ಐ ರವರು ತನಗೆ ಹಾಗೂ ಚಾಸಾ.10 ರವರಿಗೆ ರಾತ್ರಿ ಗಸ್ತು ಕರ್ತವ್ಯಕ್ಕೆ ಕರೆದು ರಾತ್ರಿ 11 ರಿಂದ ಬೇವಿನಹಳ್ಳಿ ನಂದಿಗುಡಿ, ಕರಡನಾಯಕನಹಳ್ಳಿ, ಕುಂಬಳೂರಿನಲ್ಲಿ ಗಸ್ತು ಕರ್ತವ್ಯ ಮುಗಿಸಿಕೊಂಡು ಬೆಳಿಗ್ಗೆ 5.00 ಗಂಟೆಗೆ ಮಲೇಬೆನ್ನೂರು ಬಸ್ ಸ್ಟ್ಯಾಂಡ್ ಹತ್ತಿರ ಯಾರೋ 3 ಜನ ಅನುಮಾನಾಸ್ಪದಾವಾಗಿ ತಮ್ಮ ಇಲಾಖೆಯ ಜೀಪ್‌ನ್ನು ನೋಡಿ ಓಡಿ ಹೋಗಲು ಪ್ರಯತ್ನಿಸಿದರು. ಸದರಿಯವರನ್ನು ಸುತ್ತುವರೆದು ಹಿಡಿದು ಅವರ ಹೆಸರು, ವಿಳಾಸ ವಿಚಾರಿಸಲಾಗಿ ಅವರು ಹೆಸರು ನಾಗರಾಜ್, ಕಿರಣ್ ಮತ್ತು ಮೌನೇಶಾಚಾರಿ ಎಂದು ತಿಳಿಸಿರುತ್ತಾರೆ. ಸದರಿಯವರನ್ನು ಬೆಳಿಗ್ಗೆ ಸುಮಾರು 5.30 ಗಂಟೆಗೆ ಠಾಣೆಗೆ ಕರೆದುಕೊಂಡು ಬಂದಿದ್ದು, ಪಿಎಸ್ಐ ರವರು ವಿಚಾರಣೆ ಮಾಡಲಾಗಿ, ಉಳಿದ ಆರೋಪಿತರನ್ನು ಪತ್ತೆ ಮಾಡಲು ತನ್ನನ್ನು ಚಾಸಾ.10 ಮತ್ತು 11 ರವರನ್ನು ನೇಮಕ ಮಾಡಿರುತ್ತಾರೆ. ಆರೋಪಿತರ

ಸ್ವ-ಇಚ್ಛೆಯ ಮೇರೆಗೆ ಪಿಎಸ್‌ಐ ರವರು ಆರೋಪಿತರನ್ನು ಹಾಗೂ ತಮ್ಮನ್ನು ಆರೋಪಿತರು ಹೇಳಿದ ಸ್ಥಳಗಳಿಗೆ ಪಂಚನಾಮೆಗೆಂದು ಕರೆದುಕೊಂಡು ಹೋಗಿದ್ದರು. ದಿನಾಂಕಃ 07.10.2021 ರಂದು ಪಿಎಸ್‌ಐ ರವರು ಆರೋಪಿತರ ಬೆಂಗಾವಲು ಕರ್ತವ್ಯಕ್ಕೆ ತನ್ನನ್ನು ಚಾಸಾ.10 ರವರನ್ನು ಕೊಂಡಜ್ಜಿ ಸರ್ಕಾರಿ ಪ್ರೌಢಶಾಲೆಗೆ ಕರೆದುಕೊಂಡು ಹೋಗಿದ್ದರು. ಸದರಿ ಸಂದರ್ಭದಲ್ಲಿ ಆರೋಪಿತರು ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆ ಜರುಗಿಸಿ ಛಾಯಾಚಿತ್ರ ತೆಗೆದಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ.

**16.** ಚಾಸಾ.15/ಪ್ರಾಸಾ.10 ರವರು ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 07.10.2021 ರಂದು ಮಲೇಬೆನ್ನೂರು ಠಾಣೆಯ ಗುನ್ನೆ ಸಂಃ 68/2021 ರಲ್ಲಿ ನಾಗರಾಜ್ ಮತ್ತು ರಾಯಪ್ಪ ಇಬ್ಬರು ಆರೋಪಿತರನ್ನು ವಶಕ್ಕೆ ಪಡೆದುಕೊಂಡಿದ್ದು, ಕೃತ್ಯ ನಡೆದ ಸ್ಥಳವಾದ ಕೊಂಡಜ್ಜಿ ಗ್ರಾಮದ ಸರ್ಕಾರಿ ಪ್ರೌಢಶಾಲೆಯ ಗುಮಾಸ್ತರ ಕೊಠಡಿಯಿಂದ ಕಳ್ಳತನವಾದ ಎಣ್ಣೆಯ ಪ್ಯಾಕೇಟುಗಳ ಕಳ್ಳತನ ಮಾಡಿದ ಜಾಗದಲ್ಲಿ ಚಾಸಾ.7 ಮತ್ತು 8 ರವರ ಸಮಕ್ಷಮ ಮದ್ಯಾಹ್ನ 3.15 ರಿಂದ 4.15 ರವರೆಗೆ ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತೇನೆ. ಸದರಿ ಪಂಚನಾಮೆಯನ್ನು ಜರುಗಿಸಲು ಆರೋಪಿತರೇ ಕಳ್ಳತನ ಮಾಡಿದ ಜಾಗೆಯನ್ನು ತೋರಿಸಿರುತ್ತಾರೆ. ಅದೇ ದಿನ ಚಾಸಾ.7 ಮತ್ತು 8 ರವರ ಹೇಳಿಕೆ ಪಡೆದಿರುತ್ತೇನೆ. ನಂತರ ಅದೇ ದಿನ ಚಾಸಾ.9 ರಿಂದ 12 ರವರ ಹೇಳಿಕೆ ಪಡೆದಿರುತ್ತೇನೆ. ದಿನಾಂಕಃ 17.02.2021 ರಂದು ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕ ಈಶ್ವರ ಕುಮಾರ ರವರ ಸ್ವ-ಇಚ್ಛಾ ಹೇಳಿಕೆ ಪಡೆದಿರುತ್ತೇನೆ. ದಿನಾಂಕಃ 08.05.22

ರಂದು ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಹರಿಹರ ಗ್ರಾಮಾಂತರ ಪೊಲೀಸ್ ಠಾಣೆಗೆ ದಾಖಲಾತಿಗಳನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**17.** ಚಾಸಾ.16/ಪ್ರಾಸಾ.9 ರವರು ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 11.06.2021 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ಮದ್ಯಾಹ್ನ 12.00 ಗಂಟೆಗೆ ಚಾಸಾ.1 ರವರು ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನೆ ಸಂಃ 108/2021 ರಂತೆ ಪ್ರಕರಣ ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಪ್ರಥಮ ವರ್ತಮಾನ ವರದಿ ನಿವೇದಿಸಿಕೊಂಡಿದ್ದೇನೆ. ಅದೇ ದಿನ ಚಾಸಾ.2 ಮತ್ತು 3 ರವರಿಗೆ ನೋಟೀಸು ನೀಡಿ ಚಾಸಾ.4 ರವರು ತೋರಿಸಿದ ಸ್ಥಳದಲ್ಲಿ ಚಾಸಾ.2 ಮತ್ತು 3 ರವರ ಸಮಕ್ಷಮ ಮದ್ಯಾಹ್ನ 2.00 ರಿಂದ 2.45 ರವರೆಗೆ ಪಂಚನಾಮೆ ಜರುಗಿಸಿ ಛಾಯಾಚಿತ್ರ ತೆಗೆದಿರುತ್ತೇನೆ. ನಂತರ ಚಾಸಾ.4 ರಿಂದ 6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ನಂತರ ಆರೋಪಿ ಪತ್ತೆಗಾಗಿ ಪಿಸಿ. 379 ವೆಂಕಟೇಶ್ ರವರನ್ನು ನೇಮಕ ಮಾಡಿರುತ್ತೇನೆ. ದಿನಾಂಕಃ 06.06.2022 ರಂದು ಚಾಸಾ.17 ರವರಿಗೆ ಪ್ರಕರಣದ ಕಡತವನ್ನು ನೀಡಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**18.** ಚಾಸಾ.17/ಪ್ರಾಸಾ.8 ರವರು ತನಿಖಾಧಿಕಾರಿಗಳಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕಃ 10.06.2022 ರಂದು ಚಾಸಾ.14 ರವರಿಂದ ಕಡತವನ್ನು ಸ್ವೀಕರಿಸಿ ಚಾಸಾ.1, 4 ರಿಂದ 6 ರವರ ಮರುಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಪ್ರಕರಣದ ಕಡತವನ್ನು ಪರಿಶೀಲಿಸಿ ಆರೋಪಿತರ ವಿರುದ್ಧ

ಆರೋಪ ಸಾಭೀತಾಗಿದ್ದರಿಂದ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

**19.** ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಆರೋಪಿತರು ಶಾಲೆಯಲ್ಲಿ ಇಟ್ಟಿರುವಂತಹ ಎಣ್ಣೆಯನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿ ವಿಚಾರಣೆ ಮಾಡಿದಾಗ ಆರೋಪಿತರು ತಮ್ಮ ಸ್ವ-ಖುಷಿ ಹೇಳಿಕೆಯಲ್ಲಿ ಸಾಕಷ್ಟು ಪ್ರಕರಣಗಳಲ್ಲಿ ಕಳ್ಳತನ ಮಾಡಿರುವುದು ಕಂಡುಬಂದಿರುತ್ತದೆ. ಈ ಕುರಿತಂತೆ ಅಭಿಯೋಜನೆಯ ಸಾಕ್ಷಿದಾರರು ಅಭಿಯೋಜನೆಗೆ ಪೂರಕವಾಗಿ ಸಾಕ್ಷಿ ನುಡಿದಿರುತ್ತಾರೆ. ಆದ್ದರಿಂದ ಆರೋಪಿತರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕೆಂದು ಪ್ರಾರ್ಥಿಸಿರುತ್ತಾರೆ.

**20.** ಆರೋಪಿ ಪರ ವಕೀಲರಾದ ಶ್ರೀ ನಾಗರಾಜ್ .ಬಿ. ವಕೀಲರು ತಮ್ಮ ವಾದದಲ್ಲಿ ಆರೋಪಿತರು ಯಾವುದೇ ತಪ್ಪನ್ನು ಮಾಡಿರುವುದಿಲ್ಲ. ಪೊಲೀಸರು ಆರೋಪಿತರಿಂದ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ. ಚಾಸಾ.1 ರವರು 30 ಎಣ್ಣೆ ಪ್ಯಾಕೇಟುಗಳನ್ನು ಎಲ್ಲಿಂದ ಸರಬರಾಜು ಮಾಡಲಾಗಿತ್ತು ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ದೂರು ನೀಡಲು 9 ದಿವಸಗಳ ತಡವಾದ ಬಗ್ಗೆ ಹಾಗೂ ಮೇಲಾಧಿಕಾರಿಗಳಿಗೆ ತಿಳಿಸಿದ ಬಗ್ಗೆ ದಾಖಲು ಹಾಜರುಪಡಿಸಿರುವುದಿಲ್ಲ. ಅದೇ ರೀತಿ ಸದರಿ ಪಾಮ್ ಎಣ್ಣೆ ಯಾವ ಕಂಪನಿಗೆ ಸೇರಿರುತ್ತದೆ ಹಾಗೂ ಎಷ್ಟು ಸಾಮರ್ಥ್ಯ ಇದೆ ಎಂದು ತನಿಖಾಧಿಕಾರಿ ತಿಳಿಸಿರುವುದಿಲ್ಲ. ಇನ್ನು ಆರೋಪಿತರ ಹೇಳಿಕೆಯ ಮೇರೆಗೆ ತನಿಖಾಧಿಕಾರಿಗಳು ಎಣ್ಣೆ ಪ್ಯಾಕೇಟುಗಳನ್ನು ಮಾರಾಟ ಮಾಡಿದ ಅಂಗಡಿಯವರಿಂದ ಜಪ್ತು ಪಡಿಸಿಕೊಂಡಿರುವುದಿಲ್ಲ ಹಾಗೂ ಅವರನ್ನು ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಅದೇ

ರೀತಿ ಪಂಚನಾಮೆ ಸಾಕ್ಷಿದಾರರು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಿರುವ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸಿರುವುದಿಲ್ಲ.

**21.** ಈ ಮೇಲಿನ ವಾದ ವಿವಾದಗಳನ್ನು ಆಲಿಸಿದ ನಂತರ ಅಭಿಯೋಜನೆಯ ಪ್ರಕರಣವೇನೆಂದರೆ, ದಿನಾಂಕಃ 01.06.2021 ರಂದು ರಾತ್ರಿ ಸಮಯದಲ್ಲಿ ಆರೋಪಿತರು ಕೊಂಡಜ್ಜಿ ಗ್ರಾಮದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿರುವ ಸರ್ಕಾರಿ ಪ್ರೌಢ ಶಾಲೆಯ ಕೊಠಡಿಯನ್ನು ಗಮನಿಸಿ ಸದರಿ ಕೊಠಡಿಯ ಬಾಗಿಲ ಬೀಗವನ್ನು ಕಲ್ಲಿನಿಂದ ಹೊಡೆದು ಒಳಗೆ ಪ್ರವೇಶಿಸಿ ರಟ್ಟಿನ ಬಾಕ್ಸನಲ್ಲಿದ್ದ ಸುಮಾರು ರೂ.4,500/- ಬೆಲೆ ಬಾಳುವ ಪಾಮ್ ಆಯಿಲ್‌ನ ಒಟ್ಟು 30 ಪ್ಯಾಕೇಟುಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ಚಾಸಾ.1 ರವರು ದೂರನ್ನು ನೀಡಿದ್ದು, ಹರಿಹರ ಗ್ರಾಮಾಂತರ ಪೊಲೀಸರು ತನಿಖೆಯನ್ನು ಕೈಗೊಂಡು ಆರೋಪಿತರ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ.457 ಹಾಗೂ 380 ಸಹವಾಚಕ ಕಲಂ.34 ರ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ಕಲಂ.457 ರ ಅಡಿಯಲ್ಲಿ ಅಪರಾಧವಾಗಬೇಕಾದರೆ ಕಾರವಾಸದಿಂದ ದಂಡನೆಯವಾದ ಯಾವುದೇ ಅಪರಾಧ ಮಾಡಲು ಹೊಂಚು ಹಾಕಿ ರಾತ್ರಿಯಲ್ಲಿ ಗೃಹ ಅತಿಕ್ರಮಣ ಮಾಡುವುದು ಅಥವಾ ರಾತ್ರಿಯಲ್ಲಿ ಮನೆಗೆ ಕನ್ನ ಹಾಕುವುದು ಅಪರಾಧವಾಗುತ್ತದೆ.

ಕಲಂ.380 ರ ಪ್ರಕಾರ ಅಪರಾಧವಾಗಬೇಕಾದರೆ, ಮನುಷ್ಯ ವಾಸಕ್ಕಾಗಿ ಉಪಯೋಗಿಸುವ ಅಥವಾ ಸ್ವತ್ತಿನ ಅಭಿರಕ್ಷೆಗಾಗಿ ಉಪಯೋಗಿಸುವ ಯಾವುದೇ ಕಟ್ಟಡ, ಡೇರೆ

ಅಥವಾ ಹಡಗಿನಲ್ಲಿ ಕಳುವು ಮಾಡುವ ಯಾವನೇ ವ್ಯಕ್ತಿಯು 7 ವರ್ಷಗಳ ಅವಧಿಯ ಎರಡಲ್ಲೊಂದು ಬಗೆಯ ಕಾರವಾಸದಿಂದ ದಂಡಿತನಾಗತಕ್ಕದ್ದು ಮತ್ತು ಜುಲ್ಮಾನೆಗೂ ಗುರಿಯಾಗತಕ್ಕದ್ದು.

ಈ ಎರಡು ಕಲಂನ ಪ್ರಕಾರ ಅಭಿಯೋಜನೆಯು ಆರೋಪಿತರು ರಾತ್ರಿ ವೇಳೆಯಲ್ಲಿ ಸರ್ಕಾರಿ ಪ್ರೌಢಶಾಲೆಗೆ ಅತೀಕ್ರಮಣ ಮಾಡಿ ಶಾಲೆಯಲ್ಲಿ ಇಟ್ಟಿದ್ದ ಎಣ್ಣೆ ಪ್ಯಾಕೇಟುಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆಂದು ಯುಕ್ತ ಸಂಶಯಾತೀತವಾಗಿ ರುಜುವಾತುಪಡಿಸಬೇಕಾಗಿರುತ್ತದೆ. ಅಭಿಯೋಜನೆಯು ಆರೋಪಿತರ ಮೇಲೆ ಹೊರಿಸಿರುವ ಅಪರಾಧಗಳನ್ನು ರುಜುವಾತುಪಡಿಸುವ ಉದ್ದೇಶದಿಂದ ಪ್ರಾಸಾ.1 ರಿಂದ 11 ರವರನ್ನು ಸಾಕ್ಷಿಗೆ ಒಳಪಡಿಸಿ ನಿಪಿ.1 ರಿಂದ 14 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಚಾಸಾ.1 ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ದೂರಿನಲ್ಲಿ ತಿಳಿಸಿರುವ ಅಂಶಗಳನ್ನು ಪುನರಾವರ್ತಿಸಿರುತ್ತಾರೆ. ಆದರೆ ಆರೋಪಿತರನ್ನು ನೋಡಿರುವುದಾಗಿ ಹೇಳಿಕೆ ಇರುವುದಿಲ್ಲ. ಈ ಪ್ರಸ್ತುತ ಪ್ರಕರಣದಲ್ಲಿ ಕಳ್ಳತನಕ್ಕೆ ಸಂಬಂಧಿಸಿದಂತೆ ಯಾವುದೇ ವಿವಾದ ಇರುವುದಿಲ್ಲ. ಆದರೆ ಅಭಿಯೋಜನೆಯ ಪ್ರಕರಣದ ಪ್ರಕಾರ ಈ ಘಟನೆಯು ರಾತ್ರಿ ವೇಳೆಯಲ್ಲಿ ಆಗಿರುವುದರಿಂದ ಆರೋಪಿತರು ಕಳ್ಳತನ ಮಾಡಿರುವುದನ್ನು ಪ್ರತ್ಯಕ್ಷವಾಗಿ ನೋಡಿದಂತಹ ಯಾವುದೇ ಸಾಕ್ಷಿದಾರರು ಲಭ್ಯ ಇರುವುದಿಲ್ಲ. ಆದ್ದರಿಂದ ಅಭಿಯೋಜನೆಯು ಈ ಪ್ರಕರಣವನ್ನು ಸಾಂದರ್ಭಿಕ ಸಾಕ್ಷಿದಾರರ ಆಧಾರದ ಮೇಲೆ ರುಜುವಾತುಪಡಿಸಬೇಕಾಗುತ್ತದೆ. ಸಾಂದರ್ಭಿಕ ಸಾಕ್ಷ್ಯಾಧಾರಗಳು ಒಂದಕ್ಕೊಂದು ಕೊಂಡಿಯಂತೆ ಸರಪಳಿ ರೂಪದಲ್ಲಿ ಇದ್ದಾಗ ಮಾತ್ರ ನ್ಯಾಯಾಲಯವು ಸಾಂದರ್ಭಿಕ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಆರೋಪಿತರನ್ನು

ಶಿಕ್ಷೆಗೆ ಗುರಿಪಡಿಸಬಹುದು. ಅಭಿಯೋಜನೆಯು ಹಾಜರುಪಡಿಸಿರುವ ಸಾಕ್ಷಿದಾರರ ಪೈಕಿ ಚಾಸಾ.1, ಚಾಸಾ.4, ಚಾಸಾ5, ಚಾಸಾ.6 ಇವರು ಸದರಿ ಪ್ರೌಢಶಾಲೆಯ ಶಿಕ್ಷಕರು ಹಾಗೂ ಅಡುಗೆ ಸಹಾಯಕರಾಗಿರುತ್ತಾರೆ. ಇವರೆಲ್ಲರೂ ತಮ್ಮ ಮುಖ್ಯ ವಿಚಾರಣೆಯಲ್ಲಿ ಕಳ್ಳತನವಾದ ಬಗ್ಗೆ ಹೇಳಿಕೆ ನೀಡಿರುತ್ತಾರೆ. ಆದರೆ ಯಾವುದೇ ಸಾಕ್ಷಿದಾರರು ಆರೋಪಿತರನ್ನು ಪೊಲೀಸ್ ಠಾಣೆಯಲ್ಲಿ ಗುರುತಿಸಿದ ಬಗ್ಗೆ ಹೇಳಿಕೆಯನ್ನು ನೀಡಿರುವುದಿಲ್ಲ. ಆದ್ದರಿಂದ ಈ ಪ್ರಕರಣವು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ. 27 ರ ಅಡಿಯಲ್ಲಿ ಪೊಲೀಸ್ ಸಾಕ್ಷಿದಾರರ ಮೂಲಕ ಅಭಿಯೋಜನೆಯು ರುಜುವಾತುಪಡಿಸಬೇಕಾಗಿರುತ್ತದೆ. ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ.24 ರಿಂದ 26 ರವರೆಗೆ ಪೊಲೀಸರ ಮುಂದೆ ಆರೋಪಿ ನೀಡಿದಂತಹ ಹೇಳಿಕೆಗಳು ಸಾಕ್ಷ್ಯ ಎಂದು ಪರಿಗಣಿಸಲು ಬರುವುದಿಲ್ಲ. ಆದರೆ ಪೊಲೀಸರ ಮುಂದೆ ಕಲಂ.27 ರ ಅಡಿಯಲ್ಲಿ ತಪ್ಪೊಪ್ಪಿಗೆ ನೀಡಿದರೆ ಅದು ಸಾಕ್ಷ್ಯವೆಂದು ಪರಿಗಣಿಸಬಹುದು. ಆದರೆ ಯಾವ ಹೇಳಿಕೆಯನ್ನು ಸಾಕ್ಷ್ಯ ಎಂದು ಪರಿಗಣಿಸಬೇಕೆಂದು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಬೋದರಾಜ್ ಅಲಿಯಾಸ್ ಬೋದ ಮತ್ತು ಇತರರು ವಿರುದ್ಧ ಜಮ್ಮು ಮತ್ತು ಕಾಶ್ಮೀರ ರಾಜ್ಯ(2002)8 ಎಸ್ ಸಿ ಸಿ 45 ಪ್ರಕರಣದಲ್ಲಿ ಈ ಕೆಳಗಿನಂತೆ ಅಭಿಪ್ರಾಯಪಟ್ಟಿರುತ್ತದೆ.

> 18. Sec.27 of the Indian Evidence Act 1872 is by way of proviso to Sec.25 to 26 and a statement even by way of confession made in police custody which distinctly relates to the fact discovered is admissible in evidence against the accused. This position was succinctly dealt with by this court in Delhi administration Vs. Balakrishna and Mohammed Inayathulla Vs. State of Maharastra. The words, so much of such information" as relates distinctly to

the fact thereby discovered, are very important and the whole force of the section constrates on them clearly the extent of the information admissible must depend on the exact nature of the fact discovered to which such information is required to relate. The bank has imposed by the proceeding section was presumely inspired by the fear of the legislature that a person under police influence might be induced to confess by the exercise of undue pressure. If all that is required to lift the bank be the inclusion in the confession of information relating to an object subsequently produced, it seems reasonable to suppose that the persuasive powers of the police will prove equal to the occasion, and that in practice the ban will loose its effect. The object of the provision i.e., Sec.27 was to provide for the admission of evidence which but for the existence of the section could not in consequence of the presiding sections, be admitted in evidence. It would appear that U/Sec.27 as it stands in order to render the evidence leading to discovery of any fact admissible, the information must come from any accused in custody of the police. The requirement of police custody is productive of extremely anomalous results and may lead to the exclusion of such valuable evidence in cases where person, who is subsequently taken into custody and becomes an accused, after committing a crime needs a police officer are voluntarily goes to him or to police station and state the circumstances of the crime which lead to discovery of the dead body, weapon or any other material fact, in consequence of the information thus received from him. The statement which is admissible U/Sec.27 is the one which is information leading to discovery. Thus what is admissible being the information, the same as to be proved and not the opinion formed on it by the police officer. In other words, the exact information given by the accused while in custody which lead to recovery of the articles has to be proved. It is therefore necessary for the benefit of both

> the accused and prosecution that information given should be recorded and proved and if not so recorded the exact information must be adduced through evidence.

ಈ ಮೇಲಿನ ತೀರ್ಪಿನ ಅನ್ವಯ ಪೊಲೀಸ್ ಅಧಿಕಾರಿಯು ಆರೋಪಿತರನ್ನು ಬಂಧಿಸಿದ ನಂತರ ತಪ್ಪೊಪ್ಪಿಗೆ ಪಡೆದುಕೊಂಡಿದ್ದರೆ ಆ ತಪ್ಪೊಪ್ಪಿಗೆಯಲ್ಲಿ ಆರೋಪಿತನು ಹೇಳಿದ ಎಲ್ಲಾ ವಿಷಯಗಳು ಸಾಕ್ಷ್ಯ ಎಂದು ಪರಿಗಣಿಸಲು ಬರುವುದಿಲ್ಲ. ಆದರೆ ಸದರಿ ಹೇಳಿಕೆಯ ಮೇರೆಗೆ ಪೊಲೀಸರು ಯಾವುದಾದರೂ ಒಂದು ವಸ್ತುವನ್ನು ಅಂದರೆ ಕೃತ್ಯಕ್ಕೆ ಸಂಬಂಧಿಸಿದ ವಸ್ತುವನ್ನು ಆರೋಪಿತರಿಂದ ಜಪ್ತು ಪಡಿಸಿಕೊಂಡರೆ ಅಂತಹ ಹೇಳಿಕೆಯು ಅಷ್ಟರ ಮಟ್ಟಿಗೆ ಸಾಕ್ಷ್ಯವೆಂದು ಪರಿಗಣಿಸಬಹುದು. ಅದರೆ ಅಂತಹ ಶೋಧನೆಯಾದ ನಂತರ ಅಭಿಯೋಜನೆಯ ಸಾಕ್ಷ್ಯಾಧಾರಗಳ ಸರಪಳಿಯನ್ನು ಸಂಶಯಾತೀತವಾಗಿ ರುಜುವಾತುಪಡಿಬೇಕಾಗುತ್ತದೆ. ಈ ಪ್ರಸ್ತುತ ಪ್ರಕರಣದಲ್ಲಿ ತನಿಖಾಧಿಕಾರಿಗಳಾದ ಚಾಸಾ.15 ರಿಂದ 17 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿತರಿಂದ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡು ಆರೋಪಿತರಿಂದ ವಸ್ತುವನ್ನು ಜಪ್ತುಪಡಿಸಿ ಕೊಂಡಿರುವ ಬಗ್ಗೆ ಹಾಗೂ ಆ ವಸ್ತುವನ್ನು ಶೋಧನೆ ಮಾಡಿದ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ನಿಪಿ.9 ರಂತೆ ಆರೋಪಿ ತೋರಿಸಿದ ಸ್ಥಳದ ಪಂಚನಾಮೆಯನ್ನು ಮಾಡಿದ್ದು, ಸದರಿ ಪಂಚನಾಮೆಯಲ್ಲಿ ಪಂಚರನ್ನು ಸರ್ಕಾರಿ ಪ್ರೌಢಶಾಲೆ ಕೊಠಡಿಗೆ ಕರೆಸಿದ್ದು, ಅಲ್ಲಿ ಆರೋಪಿತನು ಸದರಿ ಕೊಠಡಿಯನ್ನು ತೋರಿಸಿ ಸುಮಾರು 4 ತಿಂಗಳ ಹಿಂದೆ ರಾತ್ರಿ ಸುಮಾರು 3.30 ಗಂಟೆ ಸಮಯದಲ್ಲಿ ಸರ್ಕಾರಿ ಪ್ರೌಢಶಾಲೆಯ ಇದೇ ಕೋಣೆಯ ಬೀಗ ಮುರಿದು ಕೋಣೆಯಲ್ಲಿ ಯಾವುದೇ ಹಣ ಸಿಗದೇ ಇದ್ದಾಗ ಅಲ್ಲೇ ಇದ್ದ ಅಡುಗೆ ಎಣ್ಣೆಯ ಪ್ಯಾಕೇಟುಗಳನ್ನು ಕಳ್ಳತನ ಮಾಡಿಕೊಂಡು ಹೋಗಿದ್ದು ಅಂತಾ ತಿಳಿಸಿದ್ದು,

ಸದರಿ ಮನೆಯನ್ನು ಪರಿಶೀಲಿಸಿ ಮದ್ಯಾಹ್ನ 3.15 ರಿಂದ 4.00 ಗಂಟೆಯವರೆಗೆ ಪಂಚನಾಮೆ ಮಾಡಲಾಗಿರುತ್ತದೆ. ಆದರೆ ಅಭಿಯೋಜನೆಯು ಆರೋಪಿತರು ನೀಡಿದ ಸ್ವ-ಖುಷಿ ಹೇಳಿಕೆಯನ್ನು ಗುರುತಿಸಿಕೊಂಡಿರುವುದಿಲ್ಲ. ಆರೋಪಿತರು ತಮ್ಮ ಸ್ವ-ಖುಷಿ ಹೇಳಿಕೆಯಲ್ಲಿ ಮಲೇಬೆನ್ನೂರು ಪೊಲೀಸ್ ಠಾಣೆ ಗುನ್ನೆ ಸಂಃ 68/2021 ಕ್ಕೆ ಸಂಬಂಧಿಸಿದಂತೆ ಹೇಳಿಕೆ ನೀಡಿದ್ದು, ಸದರಿ ಹೇಳಿಕೆಯಲ್ಲಿ ಸಾಕಷ್ಟು ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಹೇಳಿಕೆ ನೀಡಿರುತ್ತಾರೆ. ಆದರೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ವರ್ಷದ ಜೂನ್ ತಿಂಗಳ ಒಂದು ದಿನ ರಾತ್ರಿ ನಾವು ಕೊಂಡಜ್ಜಿ ಕಡೆಗೆ ಕಳ್ಳತನಕ್ಕೆ ಹೊರಟೆವು. ಕೊಂಡಜ್ಜಿ ಊರಿನಲ್ಲಿ ರಾತ್ರಿಯಲ್ಲಿ ಬೀಗ ಹಾಕಿದ ಮನೆಗಳನ್ನು ಹುಡುಕುತ್ತಾ ಹೋದೆವು. ಯಾವುದೇ ಮನೆಗಳು ಕಂಡುಬರಲಿಲ್ಲ. ಅದೇ ಊರಿನ ಶಾಲೆಯ ಬಳಿ ಹೋಗಿ ಕಟ್ಟೆ ಮೇಲೆ ಕುಳಿತುಕೊಂಡೆವು. ಸ್ವಲ್ಪ ಹೊತ್ತು ಯಾರು ಸಹ ಅಲ್ಲಿಗೆ ಬರಲಿಲ್ಲ. ಬರಿಗೈಯಲ್ಲಿ ವಾಪಾಸ್ಸು ಹೋಗಬಾರದೆಂದು ಶಾಲೆಯ ಒಂದು ಕೋಣೆಯ ಬೀಗವನ್ನು ಕಲ್ಲಿನಿಂದ ಹೊಡೆದು ತೆಗೆದೆವು. ಆ ರೂಮಿನಲ್ಲಿ 30 ಪ್ಯಾಕೇಟ್ ಅಡುಗೆ ಎಣ್ಣೆಯನ್ನು ಮಾತ್ರ ಕಳ್ಳತನ ಮಾಡಿಕೊಂಡು ವಾಪಾಸ್ಸು ಊರಿಗೆ ಬಂದೆವು. ನಂತರ ಎಣ್ಣೆ ಪ್ಯಾಕೇಟುಗಳನ್ನು ಮಾರಾಟ ಮಾಡಿ ಬಂದ ಹಣವನ್ನು ಸಮನಾಗಿ ಹಂಚಿಕೊಂಡೆವು. ನನ್ನ ಪಾಲಿಗೆ ಬಂದ ಹಣವನ್ನು ನನ್ನ ದುಶ್ಚಟಗಳಿಗೆ ಖರ್ಚು ಮಾಡಿಕೊಂಡಿರುತ್ತೇನೆ ಎಂದು ಹೇಳಿಕೆ ನೀಡಿರುತ್ತಾರೆ. ಆದರೆ ಈ ಪ್ರಕರಣದಲ್ಲಿ ತನಿಖಾಧಿಕಾರಿ ಸದರಿ ಹೇಳಿಕೆಯ ಮೇರೆಗೆ ಆರೋಪಿತನು ಎಣ್ಣೆ ಪ್ಯಾಕೇಟುಗಳನ್ನು ಎಲ್ಲಿ ಮಾರಾಟ ಮಾಡಿರುತ್ತಾನೆ ಎಂಬುದಕ್ಕೆ ಸಂಬಂಧಿಸಿದಂತೆ ಆರೋಪಿತರಿಂದ ಸದರಿ ಸ್ಥಳವನ್ನು ತೋರಿಸಿದ ಬಗ್ಗೆ ಹಾಗೂ ಆ ಅಂಗಡಿಯ ಮಾಲೀಕನನ್ನು ವಿಚಾರಣೆ ಮಾಡಿ

ಸಾಕ್ಷಿದಾರರನ್ನಾಗಿ ಮಾಡಿರುವುದಿಲ್ಲ. ಆದೇ ರೀತಿ ಗುನ್ಹಾ ಸ್ಥಳದಲ್ಲಿ ಬಾಗಿಲಿಗೆ ಹಾಕಿದ ಕೀಲಿಯನ್ನು ಮುರಿದಿರುತ್ತಾರೆ ಎಂದು ದೂರಿನಲ್ಲಿ ನಮೂದಿಸಲಾಗಿತ್ತು. ಆದರೆ ತನಿಖಾಧಿಕಾರಿಯು ಆ ಬೀಗವನ್ನು ಜಪ್ತುಪಡಿಸಿಕೊಳ್ಳುವ ಹಾಗೂ ರಟ್ಟಿನ ಬಾಕ್ಸಗಳನ್ನು ತೆಗೆದುಕೊಂಡು ಬೆರಳು ಮುದ್ರೆಗಳು ಇದ್ದಲ್ಲಿ ಅವುಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸುವ ಪ್ರಯತ್ನವೂ ಸಹ ಮಾಡಿರುವುದಿಲ್ಲ. ಕೇವಲ ಆರೋಪಿತರಿಂದ ಹೇಳಿಕೆ ಪಡೆಯುವುದರಿಂದ ಆರೋಪಿತರ ಮೇಲೆ ಹೊರಿಸಿರುವ ಅಪರಾಧಗಳನ್ನು ರುಜುವಾತುಪಡಿಸಲು ಅಂತಾಗುವುದಿಲ್ಲ. ಆದ್ದರಿಂದ ತನಿಖಾಧಿಕಾರಿಯು ಸರಿಯಾದ ಪ್ರಕ್ರಿಯೆಗಳನ್ನು ಮಾಡಿಸದೇ ಸಾಕ್ಷ್ಯಾಧಾರಗಳನ್ನು ನ್ಯಾಯಾಲಯಕ್ಕೆ ಒದಗಿಸದೇ ಇರುವುದರಿಂದ ಸೂಕ್ತ ಸಾಕ್ಷ್ಯಾಧಾರಗಳ ಕೊರತೆಯಿಂದಾಗಿ ಆರೋಪಿತರ ಮೇಲೆ ಹೊರಿಸಿರುವ ಅಪರಾಧಗಳನ್ನು ಯುಕ್ತ ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿರುತ್ತದೆ. ಅದ್ದರಿಂದ ಸಂಶಯದ ಲಾಭವನ್ನು ಆರೋಪಿತರಿಗೆ ನೀಡಿ ಅಂಶ.1 ಮತ್ತು 2 ನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**22. ಅಂಶ ಸಂ.3 :-** ಈಗಾಗಲೇ ಈ ಮೇಲಿನ ಅಂಶ.1 ಮತ್ತು 2 ಅನ್ನು **ನಕಾರಾತ್ಮಕವಾಗಿ** ಉತ್ತರಿಸಿರುವುದರಿಂದ, ಈ ಕೆಳಕಂಡಂತೆ ಆದೇಶಿಸಲಾಗಿದೆ.

**: ಆದೇಶ :**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆರೋಪಿತರನ್ನು ಭಾರತೀಯ ದಂಡ ಸಂಹಿತೆ ಕಲಂ 457, 380 ಸಹವಾಚಕ ಕಲಂ.34 ರಡಿಯಲ್ಲಿನ ಅಪರಾಧಗಳಿಂದ

ಆರೋಪಿತರನ್ನು ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತರು ಜಾಮೀನಿನ ಮೇಲೆ ಬಿಡುಗಡೆಯಾಗಿರುವುದರಿಂದ ಸದರಿಯವರ ಮುಚ್ಚಳಿಕೆ ಮತ್ತು ಭದ್ರತೆಗಳನ್ನು ರದ್ದು ಮಾಡಲಾಗಿದೆ.

ಆರೋಪಿತರು ನ್ಯಾಯಾಲಯದ ಇಚ್ಛೆಯಂತೆ ಉನ್ನತ ನ್ಯಾಯಾಲಯದ ಮುಂದೆ ಈ ತೀರ್ಪಿನ ವಿರುದ್ಧ ಮೇಲ್ಮನವಿ ಅಥವಾ ಯಾವುದೇ ಅರ್ಜಿಯ ಸಮಯದಲ್ಲಿ ತಿಳುವಳಿಕೆ ಪಡೆದ ನಂತರ ಹಾಜರಾಗಲು ತಲಾ 50,000/- ಮುಚ್ಚಳಿಕೆ ಬರೆದುಕೊಟ್ಟಿದ್ದು ಈ ಮುಚ್ಚಳಿಕೆಯು ಮುಂದಿನ ಆರು ತಿಂಗಳ ಅವಧಿಯವರೆಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ. 437(ಎ) ರಡಿಯಲ್ಲಿ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರು ನನ್ನ ಉಕ್ತಲೇಖನಕ್ಕೆ ನೇರವಾಗಿ ಗಣಕೀಕರಿಸಿದ್ದು ಸೂಕ್ತ ತಿದ್ದುಪಡಿಗಳನ್ನು ಮಾಡಿದ ನಂತರ ತೆರೆದ ನ್ಯಾಯಾಲಯದಲ್ಲಿ ಇಂದು ದಿ: 27 **ನೇ ಜುಲೈ, 2026** ರಂದು ತೀರ್ಪನ್ನು ಘೋಷಿಸಲಾಯಿತು)

ಸಹಿ/-

**(ಶ್ರೀ ಬೀರಪ್ಪ ಕಾಂಬ್ಳೆ,)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**

**:ಅನುಬಂಧ:**

**1:ಅಭಿಯೋಜನೆಯವರ ಪರ ಸಾಕ್ಷಿದಾರರ ಪಟ್ಟಿ -**

ಪ್ರಾ.ಸಾ.1- ಪತ್ರೇಶ್

ಪ್ರಾ.ಸಾ.2- ನಾಗರತ್ನಮ್ಮ

ಪ್ರಾ.ಸಾ.3- ದೇವರಾಜ

ಪ್ರಾ.ಸಾ.4- ಹೇಮಾವತಿ

ಪ್ರಾ.ಸಾ.5- ಸಾಕಮ್ಮ

ಪ್ರಾ.ಸಾ.6- ಎಸ್.ಗೋವಿಂದ

ಪ್ರಾ.ಸಾ.7- ಫೈರೋಜ್ ಖಾನ್

ಪ್ರಾ.ಸಾ.8- ಅಬ್ದುಲ್ ಖಾದರ್ ಜಿಲಾನಿ

ಪ್ರಾ.ಸಾ.9- ಮಂಜುಳಾ .ಡಿ.

ಪ್ರಾ.ಸಾ.10- ರವಿಕುಮಾರ .ಡಿ.

ಪ್ರಾ.ಸಾ.11- ಬೀರೇಶ

**2:ಅಭಿಯೋಜನೆಯವರ ಪರ ದಾಖಲೆಗಳ ಪಟ್ಟಿ -**

ನಿ.ಪಿ.1 : ದೂರು,

ನಿ.ಪಿ.1(ಎ) : ಪ್ರಾ.ಸಾ.1 ರವರ ಸಹಿ,

ನಿ.ಪಿ.2 : ಕೃತ್ಯ ಸ್ಥಳ ಪಂಚನಾಮೆ,

ನಿ.ಪಿ.2(ಎ) : ಪ್ರಾ.ಸಾ.2 ರವರ ಸಹಿ,

ನಿ.ಪಿ.2(ಬಿ) : ಪ್ರಾ.ಸಾ.3 ರವರ ಸಹಿ,

ನಿ.ಪಿ.3(ಡಿ) : ಪ್ರಾ.ಸಾ.12 ರವರ ಸಹಿ,

ನಿ.ಪಿ.3 ಮತ್ತು 4 : ಛಾಯಚಿತ್ರಗಳು,

ನಿ.ಪಿ.5 : ಪ್ರಾಸಾ 2 ರವರ ಹೇಳಿಕೆ,

ನಿ.ಪಿ.6 : ನೋಟಿಸ್

ನಿ.ಪಿ.6(ಎ) : ಪ್ರಾ.ಸಾ.3 ರವರ ಸಹಿ,

ನಿ.ಪಿ.7 : ಪ್ರಾಸಾ 2 ರವರ ಹೇಳಿಕೆ,

ನಿ.ಪಿ.8 : ಪ್ರಾಸಾ 5 ರವರ ಹೇಳಿಕೆ,

ನಿ.ಪಿ.9 : ಸ್ಥಳ ಪಂಚನಾಮೆ,

ನಿ.ಪಿ.9(ಎ) : ಪ್ರಾ.ಸಾ.11 ರವರ ಸಹಿ,

ನಿ.ಪಿ.9(ಬಿ) : ಪ್ರಾ.ಸಾ.10 ರವರ ಸಹಿ,

ನಿ.ಪಿ.10 : ಛಾಯಚಿತ್ರ,

ನಿ.ಪಿ.11 : ಪ್ರಾಸಾ 6 ರವರ ಹೇಳಿಕೆ,

ನಿಪಿ.12 : ಪ್ರ.ವ.ವರದಿ

ನಿ.ಪಿ.13 : ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ. 65(ಬಿ) ಅಡಿ ಪ್ರಮಾಣ ಪತ್ರ

ನಿ.ಪಿ.13(ಎ) : ಸಹಿ,

ನಿ.ಪಿ.14 : ಪ್ರಾಸಾ 11 ರವರ ಹೇಳಿಕೆ.

**3: ಅಭಿಯೋಜನೆಯವರ ಪರ ಮುದ್ದೆಮಾಲುಗಳ ಪಟ್ಟಿ - ಇಲ್ಲ**

21,23

**4: ಆರೋಪಿಯ ಪರ ವಿಚಾರಣೆ ಮಾಡಿದ ಸಾಕ್ಷಿದಾರರು-ಇಲ್ಲ**

**5: ಆರೋಪಿಯ ಪರ ದಾಖಲೆಗಳ ಪಟ್ಟಿ -ಇಲ್ಲ**

ಸಹಿ/-

**(ಶ್ರೀ ಬೀರಪ್ಪ ಕಾಂಬ್ಳೆ,)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂ.ನ್ಯಾಯಾಲಯ, ಹರಿಹರ.**